ಶ್ರೀ ಪಾಟೂಳ್ ನಾಗರಾಜ್ : ಸಲಹೆ ಮಾಡುವುದಕ್ಕೆ ಸದನದ ಸಮಿತಿ ಮಾಡಿ. ಸಭೆಯನ್ನು ನಾಳೆ ಮುಕ್ತಾಯ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ಸಲಹೆ ಕೊಡಿ ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ತಾವು ಕುಳಿತುಕೊಂಡರೆ ಹೇಳುತ್ತೇನೆ. ಸಲಹೆ ಕೊಡಿ ಎಂದರೆ ಸದನದಲ್ಲೇ ಕೊಡಿ ಎಂದು ಅಲ್ಲ. ಪತ್ರದ ಮೂಲಕ ಹೇಳುವುದಕ್ಕೆ ಬರುತ್ತದೆ, ಬಾಯಿ ಮೂಲಕ ಹೇಳುವುದಕ್ಕೆ ಬರುತ್ತದೆ. ಅದು ಬಿಟ್ಟು ನಾನು ಬೇರೆ ಇನ್ನೇನು ಹೇಳಲಿ?

ಶ್ರೀ ಪಾಟೂಳ್ ನಾಗರಾಜ್ : ಮುಖ್ಯಮಂತ್ರಿಗಳು ನನಗೆ ಸಿಕ್ಕಿ ಎರಡು ತಿಂಗಳಾಯಿತು. ನಾನು ಹೇಗೆ ಹೇಳಲಿ?

ಅಧ್ಯಕ್ಷರು : ಪ್ರೆಸ್ ಸ್ಟೇಟ್‌ಮೆಂಟ್ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ : ಅವಮಾನ ಮತ್ತೊಂದು ಪ್ರಶ್ನೆ ಅಲ್ಲ. ನಾನು ನಮ್ಮ ಮಕ್ಕಳ ಹಿತದೃಷ್ಟಿಯಿಂದ ಈ ತೀರ್ಮಾನ ಮಾಡಿದ್ದೇನೆ. ಅವಮಾನ ಎಂಬ ವಿಚಾರ ಅಲ್ಲ. ಇಲ್ಲಿ ಯಾರು ಹೇಳಿಕೆ ಮಾತೂ ಇಲ್ಲ. ಅವರ ಬಗ್ಗೆ ನಮಗೆ ಗೌರವ ಇದೆ. ಸರ್ಕಾರದ ಬಗ್ಗೆ ಅವರ ಕಡೆಯಿಂದ ಗೌರವ ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಬ್ಬರಿಗೊಬ್ಬರು ಗೌರವ ಕೊಟ್ಟುಕೊಂಡು ಹೋದರೆ ಒಳ್ಳೆಯದೆಂದು ಈ ವಿಚಾರದ ಬಗ್ಗೆ ಇಷ್ಟೇ ಹೇಳಿ ಇದಕ್ಕಿಂತ ಹೆಚ್ಚಿಗೆ ಏನೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗೆ ಉತ್ತರವನ್ನು ನೀಡಿದ್ದೇವೆ, ಲೋಕಸೇವಾ ಆಯೋಗದಿಂದ ಮುಖ್ಯೋಪಾಧ್ಯಾಯರ ನೇಮಕಾತಿ ಬಗ್ಗೆ ಇರತಕ್ಕ ಅಧಿಕಾರವನ್ನು ಪಾಪಸ್ಸು ಪಡೆದಿದ್ದಾರೆ ಅದು ಸರಿಯಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದು ಏನೆಂದರೆ, ಈಗೇನು ಸಂದರ್ಶನ ನಡೆಯುತ್ತಿದೆ ಅದನ್ನು ಹಾಗೆಯೇ ಮುಂದುವರಿಸಿ ಅಯ್ಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ನೀವು ನಿಜವಾಗಿ ಭ್ರಷ್ಟಾಚಾರ ನಡೆಯುತ್ತಿದ್ದ ಅದನ್ನು ಸರಿಪಡಿಸಿಬೇಕೆಂದು ಹೇಳುವುದಾದರೆ, ಮೆರಿಟ್ ಆಧಾರದ ಮೇಲೆ ರೋಸ್ಟರ್ ಸಿಸ್ಟಂ ಅನುಸರಿಸಿ ನೇಮಕಾತಿ ಮಾಡುವ ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ತಾವು ಮಾಡಿರತಕ್ಕದ್ದು ರಾಜಕೀಯ ಷಡ್ಯಂತರ, ರಾಜಕೀಯಕ್ಕೋಸ್ಕರ ಕೆಲಸ ಮಾಡುತ್ತಿದ್ದೀರೆಂದು ಆರೋಪ ಮಾಡಬೇಕಾಗುತ್ತದೆ. ತಮ್ಮ ಬಂಧುಬಳಗದವರಿಗೆ ಹುದ್ದೆ ಕೊಡಬೇಕೆಂದು ಈ ರೀತಿ ಮಾಡುತ್ತಿದ್ದಾರೆಂದು ಆರೋಪಿಸಿ ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿಜೆಪಿಯ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈಗ ಸಭೆ ಮುಂದುವರಿದು ಪುನಃ ಮಧ್ಯಾಹ್ನ 2.30ಕ್ಕೆ ಸೇರುತ್ತದೆ.

(ಸಭೆಯು ಪುನಃ ಮಧ್ಯಾಹ್ನ 3.00ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷೆಣಿ ಅವರು ಪೀಠವನ್ನಲಂಕರಿಸಿದ್ದರು)

* * *

ಶ್ರೀ ಸಿ. ಬೈರೇಗೌಡ : ಆಗಲೇ ಕುತೆಗಲ್ ವಿಚಾರ.....

ಉಪಾಧ್ಯಕ್ಷೆಣಿಯವರು : ಮುಖ್ಯಮಂತ್ರಿಗಳು ಬರಲಿ ಈಗ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು

ವಿಷಯ : ಕಂಪ್ಯೂಟರ್ ಕೊಂಡುಕೊಳ್ಳುವುದರಲ್ಲಿ ಅವ್ಯವಹಾರ

ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) ಕಂಪ್ಯೂಟರ್ ಅವ್ಯವಹಾರದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ; ಮತ್ತು ಮಧ್ಯಾಹ್ನದ ಮೇಲೆ ಆ ವಿಚಾರವನ್ನು ತೆಗೆದುಕೊಳ್ಳುವುದರ ಬಗ್ಗೆಯೂ ಅರಿಕೆ ಮಾಡಿದ್ದೆ. ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಈ ವಿಷಯ ಪ್ರಸ್ತಾಪವಾಗಿದೆ. ಕರ್ತವ್ಯ ದೃಷ್ಟಿಯಿಂದ ಇಲ್ಲಿಯೂ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಸುಮಾರು 5 ಕೋಟಿ 27 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ವ್ಯವಹಾರ ಅದು. ಆಗತ್ಯವಿಲ್ಲದ ಕಂಪ್ಯೂಟರ್‌ಗೆ ಆರ್ಡರ್ ಕೊಟ್ಟು 3 ಕೋಟಿ ರೂಪಾಯಿ ದುರುಪಯೋಗವಾಗಿದೆ. ಆರ್ಡರ್ ಕೊಟ್ಟ ದಿವಸವೇ ಅಡ್ವಾನ್ಸ್ ಕೊಟ್ಟಿದ್ದಾರೆ.

ಉಪಾಧ್ಯಕ್ಷೆಣಿಯವರು : ಯಾವ ರೂಪದಲ್ಲಿ ನೋಟೀಸ್ ಕಳುಹಿಸಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬೆಳಿಗ್ಗೆಯೇ ನೋಟೀಸ್ ಕಳುಹಿಸಿದ್ದೇನೆ. ಹಾಗೂ ಪ್ರಸ್ತಾಪವನ್ನು ಮಾಡಿದ್ದೆ. ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪವಾಗಿದೆ. ಯಾವ ಕಂಪ್ಯೂಟರ್ ಅಗತ್ಯವಿಲ್ಲವೋ ಅದಕ್ಕೆ ಆರ್ಡರ್ ಕೊಟ್ಟಿದ್ದಾರೆ. ಎಕ್ಸ್‌ಪರ್ಟ್ ಕಮಿಟಿಯವರು ಕೂಡ ಈ ಕಂಪ್ಯೂಟರ್‌ನ ಅಗತ್ಯ ಇಲ್ಲವೆಂದು ಹೇಳಿದ್ದಾರೆ.

ಉಪಾಧ್ಯಕ್ಷೆಣಿಯವರು : ಅದು ಡಿಪಿಎಆರ್.ಗೆ ಸಂಬಂಧಪಟ್ಟದ್ದು. ಆದ್ದರಿಂದ ಮುಖ್ಯಮಂತ್ರಿಗಳು ಬಂದಮೇಲೆ ಬೈರೇಗೌಡರದ್ದು ಮತ್ತು ನಿಮ್ಮದು ಎರಡನ್ನೂ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ಒಂದು ಹಕ್ಕುಚ್ಯುತಿ ನಿರ್ಣಯವನ್ನು.....

ಉಪಾಧ್ಯಕ್ಷೆಣಿಯವರು : ವಾಟಾಳ್ ಅವರೆ ಒಂದು ನಿಮಿಷ ಇರಿ. ಪ್ರೊ. ನಂಜುಂಡಸ್ವಾಮಿಯವರು ಆಗಿನಿಂದ ನಿಂತಿದ್ದಾರೆ. ಅವರು ಹೇಳಲಿ.

ಪ್ರೊ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ ಕಳೆದ ಅಧಿವೇಶನದಲ್ಲಿ ನಾನು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಒಂದು ಹಕ್ಕುಚ್ಯುತಿ ಪ್ರಶ್ನೆ ಕಳುಹಿಸಿದ್ದೆ. ಆದಕ್ಕೆ ಅವರು ಉತ್ತರ ಕಳುಹಿಸಿಕೊಡುವುದಕ್ಕೆ ಸಭಾಧ್ಯಕ್ಷರು 15 ದಿವಸ ಕಾಲಾವಕಾಶ ಕೊಟ್ಟಿದ್ದರು. ಕಾಲಾವಕಾಶ ಮುಗಿದಿದೆ. ಅದು ಏನಾಗಿದೆ? ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿನ್ನೆ ದಿವಸ ಕಮರಲ್ ಇಸ್ಲಾಂ ಅವರು ಮತ್ತು ರಾಯರೆಡ್ಡಿಯವರು ಸ್ಕೇಲ್ಸಿಟ ಮೇಲೆ ಸ್ಟೇಟ್‌ಮೆಂಟ್ ಮಾಡಬೇಕು ಎಂದಾಗ ನಾನು ಮಾಡುತ್ತೇನೆ ಎಂದು ಹೇಳಿದ್ದೆ. ಆದಕ್ಕೆ ತಾವು ಕಾಲಾವಕಾಶ ಮಾಡಿಕೊಟ್ಟರೆ ಮಾಡುತ್ತೇನೆ.

ಉಪಾಧ್ಯಕ್ಷೆಣಿಯವರು : ಒಂದು ನಿಮಿಷ.

ಶ್ರೀ ವಾಟಾಳ್ ನಾಗರಾಜ್ : ಬೆಳಿಗ್ಗೆ ತಮಗೆ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿದ್ದೇನೆ.

ಉಪಾಧ್ಯಕ್ಷೆಣಿಯವರು : ಯಾವುದರ ಬಗ್ಗೆ? ವಿಷಯ ಕಾವೇರಿ ಜಲ ವಿವಾದದ ಸಂಬಂಧದಲ್ಲಿ ಹಕ್ಕುಚ್ಯುತಿ ನಿರ್ಣಯದ ಬಗ್ಗೆ :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : 10-7-92ರಂದು ಕಾವೇರಿ ಜಲವಿವಾದ ಸಂಬಂಧದಲ್ಲಿ ಹಕ್ಕುಚ್ಯುತಿ ವಿಷಯವನ್ನು ಚರ್ಚಿಸುತ್ತಾ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಡಿ.ಬಿ. ಚಂದ್ರೇಗೌಡರು ಮತ್ತು ರಾಜ್ಯದ ರೈತ ಸಂಘದ ಮುಖಂಡರೂ ಹಾಗೂ ಶಾಸಕರೂ ಆದ ಪ್ರೊ. ನಂಜುಂಡಸ್ವಾಮಿ ಅವರು ಮುಖ್ಯ ಅಭಿಯಂತರರು, ನೀರಾವರಿ ಇಲಾಖೆ ಬೆಂಗಳೂರು, ಇವರು ಕಾರ್ಯಪಾಲಕ ಅಭಿಯಂತರರು ನೀರಾವರಿ ಇಲಾಖೆ, ಹಾಸನ ಅವರಿಗೆ ಬರೆದ ಪತ್ರದ ನಕಲನ್ನು ಸಭೆಯ ಗಮನಕ್ಕೆ ತಂದರು. ಇದನ್ನು ಸಭಾನಾಯಕರಾದ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ತಮ್ಮ ಉತ್ತರದಲ್ಲಿ ಅದು ಅಧಿಕೃತವಾದ ದಾಖಲೆ ಆಗುವುದಿಲ್ಲವೆಂದು ಪ್ರತಿಪಾದಿಸಿದರು. ಇದರಿಂದಾಗಿ ಹಕ್ಕುಚ್ಯುತಿ ಆಗಿದೆ. ಅದೇನೆಂದರೆ ವಿರೋಧ ಪಕ್ಷಗಳಲ್ಲಿ ನಾವೇನಿದ್ದೇವೆ, ನಾವು ವಿರೋಧ ಪಕ್ಷದ ನಾಯಕರು ಮತ್ತು ರೈತ ಸಂಘದ ಅಧ್ಯಕ್ಷರು ಈ ನೀರನ್ನು ಬಿಟ್ಟಿದ್ದಾರೆ ಎಂದು ಪತ್ರ ಏನು ಕಳುಹಿಸಿದ್ದಾರೆ ಅದರ ಬಗ್ಗೆ ನಮ್ಮದು ಪ್ರಾಮಾಣಿಕತೆಯ ಪ್ರಶ್ನೆಯಾಗಿದೆ; ಆದರೆ ಈಗ ಮುಖ್ಯಮಂತ್ರಿಗಳು ನಿಮ್ಮ ಪತ್ರ ಸರಿಯಾಗಿಲ್ಲ ಎಂದು ಹೇಳಿದ್ದಾರೆ. ಅದು ಸರಿ ಇದೆಯೇ ಇಲ್ಲವೇ ಎಂಬುದು ತೀರ್ಮಾನವಾಗಬೇಕು.

ಉಪಾಧ್ಯಕ್ಷೆಣಿಯವರು : ಈ ವಿಷಯವೂ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟದ್ದೆ ಆದ್ದರಿಂದ ಅವರು ಬಂದಮೇಲೆ ಕೆಲವಾರು ವಿಷಯಗಳನ್ನು ತಾವು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ತೆಗೆದುಕೊಳ್ಳೋಣ. ಈಗ ಸಭೆಯ ಮುಂದೆ ಕಾಗದ ಪತ್ರಗಳನ್ನು ಮುಂಡಿಸುವುದು; ಅದು ಎರಡು ನಿಮಿಷದಲ್ಲಿ ಮುಗಿದುಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಈಗಾಗಲೇ 3 ಘಂಟೆ 10 ನಿಮಿಷ ಆಯಿತು ಸಂಜೆ 6 ಘಂಟೆಗೆ ಸಭೆ ಮುಗಿಯುತ್ತದೆ. ಇದು ಗುರುತರವಾದ ವಿಷಯ. ಆದ್ದರಿಂದ ಒಂದು ನಿಮಿಷ ಹೇಳಿಬಿಡುತ್ತೇನೆ.

ಉಪಾಧ್ಯಕ್ಷೆಣಿಯವರು : ಮತ್ತೆ ಅವರು ಬಂದಮೇಲೆ ಹೇಳಬೇಕಾಗುತ್ತದೆ. ಈಗ ಒಂದು ಸಾರಿ ಹೇಳಿ ಆಗ ಒಂದು ಸಾರಿ ಏತಕ್ಕೆ? ಅವರು ಬಂದಮೇಲೆ ತಮಗೆ ಅವಕಾಶ ಕೊಡುತ್ತೇನೆ, ತಾವು ಮಾತನಾಡಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷೆಣಿಯವರೆ, ನಾನು ಹಾಗೂ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಹಕ್ಕುಚ್ಯುತಿ ಪ್ರಶ್ನೆ ಬೆಳಿಗ್ಗೆ ಕೊಟ್ಟಿದ್ದೇವೆ. ಅದನ್ನು ಓದಿ ಹೇಳುತ್ತೇನೆ.

ಉಪಾಧ್ಯಕ್ಷೆಣಿಯವರು : ಅದು ನನ್ನ ಮುಂದೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ದಯಮಾಡಿಸಿದರು.

ಶ್ರೀ ಎಸ್. ಬಂಗಾರಪ್ಪ : ನೀವು ಅದನ್ನು ಪ್ರಕಟ ಮಾಡುವ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇದು ಅದೇ ವಿಷಯಕ್ಕೆ ಸಂಬಂಧಪಟ್ಟ ಹಕ್ಕುಚ್ಯುತಿ ಪ್ರಶ್ನೆ. ಇದರಲ್ಲಿ ವಿಶೇಷವಾಗಿ ಏನಾಗಿದೆ, ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬಹಳ ಅವಶ್ಯಕ ಎಂದು ಏತಕ್ಕೆ ಹೇಳುತ್ತೇನೆಂದರೆ ಒಂದು ಹೊಣೆಗಾರಿಕೆ ಇಲ್ಲದ ಸರ್ಕಾರ ನಡೆಸುವಂಥ ಒಂದು ಹೊಸ ವಿಧಾನ ಕರ್ನಾಟಕದಲ್ಲಿ ಜಾರಿಗೆ ಬಂದಿದೆ ಎಂದು ನಾನು ಆರೋಪ ಮಾಡುತ್ತಿದ್ದೇನೆ. A new technique of running a government without accountability, by sending Do letters without signatures and without dates and saying that the Opposition has brought a spurious letter. ಇದರ ಸತ್ಯಾಸತ್ಯತೆಯ ಶೋಧನೆ ಆಗಲೇಬೇಕು. ಏಕೆಂದರೆ ಇದು ವಿರೋಧ ಪಕ್ಷಗಳ ಘನತೆ ಗೌರವದ ಪ್ರಶ್ನೆ. ಇದನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ. ಆ ಕಾರಣದಿಂದ ಮತ್ತೆ ಒಂದು ಹಕ್ಕುಚ್ಯುತಿ. ಮತ್ತೆ ಮುಖ್ಯಮಂತ್ರಿಗಳು ನಿನ್ನೆ ಈ ಸದನಕ್ಕೆ ನೀರು ಬಿಟ್ಟಿಲ್ಲ ಎಂದು ಸುಳ್ಳು ಹೇಳಿದ್ದಾರೆ. ನಾವು ಈ ಹಕ್ಕುಚ್ಯುತಿ ಪ್ರಶ್ನೆ ಸೂಚನೆ ಜೊತೆಗೆ ಅಧಿಕೃತ ದಾಖಲೆಗಳನ್ನು ಲಗತ್ತಿಸಿದ್ದೇವೆ. ಆ ಕಾರಣ....

ಉಪಾಧ್ಯಕ್ಷೆಣಿಯವರು : ಈಗ ಮೊದಲನೆಯದಾಗಿ ಯಾವುದನ್ನು ತೆಗೆದುಕೊಳ್ಳಬೇಕು ಎಂಬುದರ ಮೇಲೆ ಮತ್ತೆ ತಾವು ಮಾತನಾಡುವಿರಂತೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇದನ್ನೇ ಮೊದಲು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷೆಣಿಯವರು : ಈಗ ಕುಣಿಗಲ್ ವಿಚಾರ ಒಬ್ಬರು ಮೊದಲು ಎತ್ತಿದ್ದಾರೆ. ಎಲ್ಲವನ್ನೂ ತೆಗೆದುಕೊಳ್ಳೋಣ. ಪೇಪರ್ಸ್ ಲೈಡ್ ಎರಡು ನಿಮಿಷದಲ್ಲಿ ಮುಗಿದುಹೋಗುತ್ತದೆ. ಅದು ಮುಗಿದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಬಂದನಂತರ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ.

ಉಪಾಧ್ಯಕ್ಷೆಣಿಯವರು : ಎರಡು ನಿಮಿಷ ಇರಿ. ಪೇಪರ್ಸ್ ಲೈಡ್ ಆದನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಹಕ್ಕುಚ್ಯುತಿ ಮಾನ್ಯ ವಿರೋಧ ಪಕ್ಷದ ನಾಯಕರ ಮೇಲೆ ಮತ್ತು ಪ್ರೊಫೆಸರ್ ನಂಜುಂಡಸ್ವಾಮಿ ಅವರ ಮೇಲೆ ನಾನು ತಂದಿದ್ದೇನೆ. ನಿನ್ನೆ ಅವರು ಸಹಿ ಇಲ್ಲದ ಪತ್ರವನ್ನು ಇಲ್ಲಿ ಕೊಟ್ಟಿದ್ದಾರೆ. ಈ ಸದನದಲ್ಲಿ ಕೊಟ್ಟಿದ್ದಾರೆ. ಆ ಪತ್ರದ ಪರಿಸ್ಥಿತಿಯನ್ನು ನೋಡಿದಾಗ ಅಲ್ಲಿ ವಿರೋಧ ಪಕ್ಷದವರು ಯಾವುದೂ ಸಹಿ ಇಲ್ಲದ ಪತ್ರವನ್ನು ಕೊಟ್ಟಿದ್ದಾರೆನ್ನುವ ಭಾವನೆ ಬಂದು, ನಮ್ಮ ಮೇಲೆ.....

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದಲ್ಲಿ ಒಂದೇ ಒಂದು ವಿಚಾರ ಹೇಳುತ್ತೇನೆ. ಕಾವೇರಿ ಜಲವಿವಾದದ ಬಗ್ಗೆ ಮಾತನಾಡಬೇಕಾದರೆ ಆ ಪತ್ರದ ಬಗ್ಗೆ ಪ್ರಸ್ತಾಪ ಮಾಡಿದರೆಂದು ಕಾಣುತ್ತದೆ. ಪ್ರೊಫೆಸರ್‌ರವರದ್ದೂ ಅದೇ ವಿಚಾರ ಎಂದು ಕಾಣುತ್ತದೆ. ಆ ವಿಚಾರದ ಬಗ್ಗೆ ಚರ್ಚೆಯಾಗಿ, ಆ ಪತ್ರದ ಬಗ್ಗೆ ಅದರೂ ಹೇಳುವುದು ಹೇಳಿದ್ದಾರೆ, ನಾವು ಹೇಳುವುದನ್ನು ನಾವು ಹೇಳಿದ್ದೇವೆ. ಆ ವಿಚಾರ ಮುಕ್ತಾಯವಾಗಿದೆ ಎಂದ ಮೇಲೆ ಹಕ್ಕುಚ್ಯುತಿ ಬರತಕ್ಕ ಪ್ರಶ್ನೆ ಎಲ್ಲಿಂದ ಬರುತ್ತದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅದು ಮುಕ್ತಾಯ ಆಗಿಲ್ಲ. ಈ ಸರ್ಕಾರ.....

ಶ್ರೀ ಎಸ್. ಬಂಗಾರಪ್ಪ : ನಮ್ಮ ಪ್ರಕಾರ ಮುಕ್ತಾಯವಾಗಿದೆ. ನಿಮ್ಮ ಪ್ರಕಾರ ಇಲ್ಲ ಎಂದರೆ, ಏನೂ ಮಾಡುವುದಕ್ಕಾಗುವುದಿಲ್ಲ. ಮಿಕ್ಕಿದ್ದು ಸಭಾಧ್ಯಕ್ಷೆಣಿಯವರಿಗೆ ಬಿಟ್ಟಿದ್ದು.

ಉಪಾಧ್ಯಕ್ಷೆಣಿಯವರು : ಒಂದು ನಿಮಿಷ. ನಾವು ಇಲ್ಲಿ ಕ್ರಮವಾಗಿ ಹೋಗಬೇಕಾಗುತ್ತದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇದು ಒಟ್ಟು ಸದನದ ಘನತೆಯ ಪ್ರಶ್ನೆ ಮತ್ತು ಗೌರವದ ಪ್ರಶ್ನೆ ಇದೆ. ಇದು ಸದಸ್ಯರು ಮತ್ತು ವಿರೋಧ ಪಕ್ಷಗಳ ಗೌರವದ ಪ್ರಶ್ನೆ. ಈ ಪತ್ರವನ್ನು ನಾವು ತಯಾರು ಮಾಡಿ ತಂದಿಲ್ಲ. Madam Deputy Speaker, I received it from Hassan through a very senior legislator of the ruling party. ಅವರು ಹೆಸರು ಹೇಳುವುದಿಲ್ಲ. ಏಕೆಂದರೆ ಅವರೇ ಈ ಸದನದಲ್ಲಿ ಮಂಡಿಸಬಹುದಿತ್ತು. ಅವರದ್ದು ರಾಷ್ಟ್ರೀಯ ಪಕ್ಷ, ಅವರಿಗೆ ತೊಡಕುಗಳು ಇವೆ. ರಾಜ್ಯದ ಸಮಸ್ಯೆಗಳಿಗಿಂತಾ ಅವರ ಪಕ್ಷ ದೊಡ್ಡದು ಅವರಿಗೆ. I got this letter from a senior legislater of the ruling party coming from the cauvery basin. ಇದು ನಾನು ತಯಾರು ಮಾಡಿದ ಕಾಗದ ಅಲ್ಲ. This has come directly from the irrigation Department, Hassan and the government cannot escape saying that this is a spurious letter. No. ನಾವು ಇದನ್ನು ಹೀಗೇ ಬಿಡುವುದಕ್ಕಾಗುವುದಿಲ್ಲ. ಇದು ಸತ್ಯಾನೇ, ಮುಖ್ಯಮಂತ್ರಿಗಳು ನಿನ್ನೆ ಹೇಳಿದ್ದು ಸತ್ಯಾನೇ ಎಂದು ಸಾಬೀತು ಆಗಬೇಕು. ಇದು ನಮ್ಮ ಘನತೆ ಗೌರವದ ಪ್ರಶ್ನೆ.

ನಾವು ಹುಡುಗಾಟ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ ಇದು ಮುಕ್ತಾಯವಾಗಿಲ್ಲ. ಇದನ್ನು ಪ್ರಿವಿಲೇಜ್ ಕಮಿಟಿಗೂ ಕಳುಹಿಸಬೇಕು. ಮತ್ತೆ ಸದನದ ಸಮಿತಿ ಒಂದು ರಚನೆ ಮಾಡಿ 15 ದಿವಸಗಳಲ್ಲಿ ಏನು ನಾವು ಸುಳ್ಳು ಹೇಳಿದ್ದೇವೋ ನಾವು ತಯಾರು ಮಾಡಿದ್ದೇವೋ ಈ ಕಾಗದ, ಅಥವಾ whether this officer sent this letter actually to Hassan ಮತ್ತೆ ಎಲ್ಲಿಗೆ ಬರುತ್ತದೋ, ಇಂತಹ ಆಫೀಸರ್ ಮೇಲೆ ಕ್ರಮ ತೆಗೆದುಕೊಳ್ಳಬೇಕು. This man Capt. Raja Rao sends it in his name and signed S. Raja Rao ಎಂದು ಕೆಳಗೆ ಬರೆಯುತ್ತಾರೆ. without a date and without a signature. But there is a counter signature here, a small signature for having received this D.O. letter. ಮತ್ತೆ ನಾವು ಇಲ್ಲಿ ಬಂದು ಹುಡುಗಾಟ ಮಾಡುತ್ತಿದ್ದೇವೆ ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರೆ ನಾವು ಬಿಡುವುದಿಲ್ಲ. ಬಿಡಕೂಡದು ತಾವು. ಈ ಸದನದ ಗೌರವದ ಪ್ರಶ್ನೆ. ಆ ಕಾರಣ ಸದನದ ಸಮಿತಿ ಮಾಡಿ : ಇವರು ನೀರು ಬಿಟ್ಟಿದ್ದಾರೋ ಇಲ್ಲವೋ ಎಂದು 15 ದಿವಸಗಳಲ್ಲಿ ಪತ್ತೆ ಮಾಡಬಹುದು. ಅಂಕಿಅಂಶಗಳನ್ನು ನಾವು ಜೊತೆಯಲ್ಲೇ ಕಳುಹಿಸಿಕೊಟ್ಟಿದ್ದೇವೆ. ಬೇರೆ ಬೇರೆ ಜಲಾಶಯಗಳಲ್ಲಿ ಮೇ 20ರಂದು ಏನು ರೀಡಿಂಗ್ ಇತ್ತು ಹಾಗೂ ಜೂನ್ 3ನೇ ತಾರೀಖಿಗೆ ಏನೇನು ರೀಡಿಂಗ್ ಇದೆ ಎಂದು ಅಂಕಿಅಂಶಗಳನ್ನು ಕೊಟ್ಟಿದ್ದೇವೆ. 13 ದಿವಸಗಳಲ್ಲಿ ಕಬಿನಿ ಖಾಲಿಯಾಗಿದೆ. ವಿದ್ಯುತ್ ಮತ್ತು ಬೆಂಗಳೂರಿಗೆ ಕುಡಿಯುವ ನೀರಿಗೆ ಬಟ್ಟಿದ್ದೇವೆ ಎಂದು ಹೇಳುತ್ತಾರೆ. ಈ 13 ದಿವಸಗಳಲ್ಲಿ ಇದಕ್ಕೆ ಬಿಡುವುದು 1 ಟಿಎಂಸಿ ಅಡಿ ನೀರೂ ಆಗುವುದಿಲ್ಲ. The same water which is released for power production is utilised for drinking water in Bangalore City. ನಾವು ಆಡುವ ಮಕ್ಕಳು ಅಲ್ಲ. ನಮಗೆ ನೀರಾವರಿ ಎಂದರೆ ಏನೆಂದು ಗೊತ್ತಿದೆ. ವಿದ್ಯುತ್ ಉತ್ಪಾದನೆ ಹಾಗೂ ಕುಡಿಯುವ ನೀರಿಗೆ 1 ಟಿಎಂಸಿ ಅಡಿ ನೀರು ಆಗಬಹುದು. ಇನ್ನೂ ನಾಲ್ಕೂವರೆ ಟಿಎಂಸಿ ಅಡಿ ನೀರು ಎಲ್ಲಿಗಹೋಯಿತು? ತಮಿಳುನಾಡಿಗೆ ಹೋಯಿತು. ನಿನ್ನೆ ದಿವಸ ಮುಖ್ಯಮಂತ್ರಿಗಳು ಸುಳ್ಳುಹೇಳಿದ್ದಾರೆ. ಮತ್ತೆ ನಾವು ಸುಳ್ಳುಗಾರರು ಎಂದು ಹೇಳುತ್ತಾರೆ. ಆದುದರಿಂದ ಯಾರದು ಸತ್ಯ ಎಂದು ಸಾಬೀತು ಆಗಬೇಕೋ, ಬೇಡವೋ? ನಮ್ಮ ಜವಾಬ್ದಾರಿ ಇದು. ನೀವು ಏನು ಮಾಡುತ್ತೀರೋ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಹಕ್ಕುಚ್ಯುತಿ ಇಷ್ಟೇ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು.....

Sri BLASIUS D'SOUZA : I am on a Point of Order. The subject has been discussed in detail on10th July and same subject is being raised. It is not proper for the hon. members to dwell uponthe same subject again and again. I request the Hon'ble Deputy Speaker to give a ruling on this. We cannot take up the same matter again and again.

Prof : M.D. NANJUNDA SWAMY : This is not be same matter.

ಶ್ರೀ ವಾಟಾಳ್‌ನಾಗರಾಜ್ : ನಾನು ತಂದಿರುವ ಹಕ್ಕುಚ್ಯುತಿ ಇಷ್ಟೇ, ನಾನು ವಿರೋಧ ಪಕ್ಷದಲ್ಲಿ ಇದ್ದು ವಿರೋಧ ಪಕ್ಷದ ನಾಯಕರ ಮೇಲೆ ಮತ್ತು ಮತ್ತೊಬ್ಬ ವಿರೋಧ ಪಕ್ಷದ ಸದಸ್ಯರ ಮೇಲೆ ಹಕ್ಕುಚ್ಯುತಿಯನ್ನು ತರುತ್ತಿದ್ದೇನೆ. ಬಹುಶಃ ನನಗನಿಸುತ್ತದೆ ಆ ರೀತಿ ತಾವು ಸಹಿ ಇಲ್ಲದ ಪತ್ರವನ್ನು ಕೊಡುವುದಾದರೆ ಇಲ್ಲಿ ಇಡೀ ವಿರೋಧ ಪಕ್ಷಕ್ಕೆ ಅಗೌರವಾಗುತ್ತದೆ ಮತ್ತು ಸದನದಲ್ಲಿ ಹಕ್ಕುಚ್ಯುತಿಯಾಗುತ್ತದೆ. ಎನ್ನುವುದು ನಮ್ಮ ಪ್ರಶ್ನೆ.

ಉಪಾಧ್ಯಕ್ಷಿಣಿಯವರು : ಇಬ್ಬರೂ ಒಟ್ಟಿಗೆ ಮಾತನಾಡಿದರೆ ಹೇಗೇ ವಾಟಾಳ್ ನಾಗರಾಜ್‌ರವರೇ ತಾವು ಮೊದಲು ಮಾತನಾಡಿ. ಆಮೇಲೆ ಪ್ರೊ. ನಂಜುಂಡಸ್ವಾಮಿಯವರು ಮಾತನಾಡಲಿ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಮಾನ್ಯ ಮುಖ್ಯಮಂತ್ರಿಗಳು ಸರಿಯಾಗಿ ಕ್ಯಾಟಗರಿಕಲ್ ಆಗಿ ಹೇಳಿದ್ದಾರೆ, that we have not let a single drop of water to Tamil Nadu. ಚರ್ಚೆಯಾದ ನಂತರ ಪುನಃ ಕಾವೇರಿ ವಿಷಯದ ಬಗ್ಗೆ ಇಷ್ಟೊಂದು ಚರ್ಚೆ ಮಾಡುವುದು ಸರಿಯೇ?

ಶ್ರೀ ವಾಟಾಳ್ ನಾಗರಾಜ್ : ಹಕ್ಕುಚ್ಯುತಿ ಹೇಗೆ ಆಗಿದೆ ಎನ್ನುವ ಬಗ್ಗೆ ಮತ್ತೊಂದು ಸಾರಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ದಯಮಾಡಿ ಪರಾಂಭರಿಸಬೇಕು. ದಿನಾಂಕ 10–7–92ರಂದು ಕಾವೇರಿ ಜಲಾನಯನ ಸಂಬಂಧದಲ್ಲಿ ಹಕ್ಕುಚ್ಯುತಿಯಾಗಿದೆ ಎನ್ನುವ ವಿಷಯವನ್ನು ಚರ್ಚಿಸುತ್ತಾ ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಮತ್ತು ರಾಜ್ಯದ ರೈತ ಸಂಘದ ಮುಖಂಡರಾದ ಹಾಗೂ ಶಾಸಕರು ಆದ ಪ್ರೊಫೆಸರ್ ನಂಜುಂಡಸ್ವಾಮಿಯವರು, ಮುಖ್ಯ ಅಭಿಯಂತರು, ನೀರಾವರಿ ಇಲಾಖೆ, ಬೆಂಗಳೂರು ಇವರು ಕಾರ್ಯನಿರ್ವಾಹಕ ಅಭಿಯಂತರು, ನೀರಾವರಿ ಇಲಾಖೆ, ಹಾಸನ ಇವರಿಗೆ ಬರೆದ ಪತ್ರದ ಸಂಖ್ಯೆ ಆದನ್ನು ನಾನು ಸಭೆಯ ಗಮನಕ್ಕೆ ತಂದರೆ ಅದನ್ನು ಸಭಾನಾಯಕರಾದಂತಹ ಹಾಗೂ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ತಮ್ಮ ಉತ್ತರದಲ್ಲಿ ಅದು ಅಧಿಕೃತ ದಾಖಲೆಯಾಗುವುದಿಲ್ಲವೆಂದು ಪ್ರತಿಪಾದಿಸಿದರು. ಅದು ಅಧಿಕೃತ ದಾಖಲೆಯಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಅದರ ಬಗ್ಗೆ ಅವರನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅಧಿಕೃತ ದಾಖಲೆ ಅಲ್ಲದಿದ್ದರೆ, ವಿರೋಧ ಪಕ್ಷದ ಸದಸ್ಯರು ಇದು ಅಧಿಕೃತವೆಂದು ತರುವುದಾದರೆ ನಮ್ಮ ಮೇಲೆ ಸಾರ್ವಜನಿಕರಿಂದ ಏನು ಅಭಿಪ್ರಾಯ ಬರುತ್ತದೆ? ಇವರು ಏನೋ ಒಂದು ಸಹಿ ಇಲ್ಲದ ಪತ್ರವನ್ನು ತಂದು ಸಭೆಯಲ್ಲಿ ಪ್ರದರ್ಶನ ಮಾಡಿದರು, ಇವರಿಗೆ ಜವಾಬ್ದಾರಿ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ. ತಮ್ಮಲ್ಲಿ ಮನವಿ ಮಾಡುವುದು ಏನೆಂದರೆ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸುವುದಲ್ಲದೆ ಇದು ನ್ಯಾಯವೇ ಅಲ್ಲವೇ ಇದು ಯಾವ ಪತ್ರ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಒಂದು ಸದನದ ಸಮಿತಿಯನ್ನು ನೇಮಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ಈ ವಿಷಯ ನಿನ್ನೆ ಚರ್ಚೆಗೆ ಬಂತು. ಈ ಕಡೆಯವರು ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಅದರ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ರೂಲಿಂಗನ್ನು ಮಾನ್ಯ ಸಭಾಧ್ಯಕ್ಷರು ಕಾದಿರಿಸಿದ್ದಾರೆ. ರೂಲಿಂಗ್ ಇನ್ನೂ ಕೊಟ್ಟಿಲ್ಲ. ರೂಲಿಂಗ್ ಕೊಟ್ಟ ಮೇಲೆ ತಾವು ಅದರ ಬಗ್ಗೆ ಮತ್ತೆ ಮಾತನಾಡುವುದರಲ್ಲಿ ಅರ್ಥವಿಲ್ಲ. ರೂಲಿಂಗ್ ಕೊಡಬೇಕಾಗಿದೆ.